e-mail hosavishesha@gmail.com
e-paper: http://www.hosadigantha.in

ವರ್ಲ್ಡ್ ವೆಟ್‌ಲ್ಯಾಂಡ್ ಡೇ (WWD) ರಾಮ್ಸರ್ ಕನ್ವೆನ್‌ಶನ್. ಹೆಸರಿನಿಂದ ಪ್ರಸಿದ್ಧ. ಇದೇ ದಿನ, (ಫೆ. 2, 1971) ಇರಾನ್ ದೇಶದ ಪ್ರತಿಷ್ಠಿತ ಊರು ರಾಮ್ಸರ್‌ನಲ್ಲಿ ಕೆಲ ಪರಿಸರ ಪ್ರಿಯರ ಪ್ರಯತ್ನದ ಫಲವಾಗಿ, ಪರಿಸರ ಸ್ನೇಹಿ ಬದುಕು ಮಾನವ ರೂಢಿಸಿಕೊಳ್ಳಬೇಕು ಎಂಬ ಕಾಳಜಿಯ ಧ್ವನಿಯಾಗಿ ಈ ಆಚರಣೆ ಜಾರಿಗೆ ಬಂತು. ರಾಮ್ಸರ್ ಕ್ಯಾಸ್ಪಿಯನ್ ಸಮುದ್ರದ ದಡದಲ್ಲಿರುವುದರಿಂದ ಮೊದಲು ದಡದ ಸ್ವಚ್ಛತೆಯ ಮೂಲಕ ಆರಂಭಿಸಲಾಯಿತು. 1997ರ ನಂತರ ಸ್ವಯಂಸೇವಾ ಸಂಸ್ಥೆಗಳ ರಂಗಪ್ರವೇಶವಾಯಿತು. 1997-2007ರ ಅವಧಿಯಲ್ಲಿ 95 ರಾಷ್ಟ್ರಗಳಲ್ಲಿ ತರಿ ಭೂಮಿಯ ಬಗ್ಗೆ ಜಾಗ್ರತಿ ಮೂಡಿಸುವ ಅಭಿಯಾನ ಹಮ್ಮಿಕೊಳ್ಳಲಾಯಿತು. ವಿಶೇಷ ಉಪನ್ಯಾಸ, ಪರಿಸರದೆಡೆಗೆ ನಡಿಗೆ, ಜಾಥಾ, ಮಕ್ಕಳಿಗಾಗಿ ಪರಿಸರ ಚಿತ್ರ ಸ್ಪರ್ಧೆ, ಸಮುದಾಯದ ಸಹಭಾಗಿತ್ವದಲ್ಲಿ ಕೆರೆ ದಡಗಳ ಸ್ವಚ್ಛತೆ, ಬಾನುಲಿ ಹಾಗೂ ದೂರದರ್ಶನದಲ್ಲಿ ಸಂದರ್ಶನ, ಪತ್ರಿಕೆಗಳಿಗೆ ಲೇಖನ, ಸಂಪಾದಕರಿಗೆ ಪತ್ರ ಬರೆಯುವ ಅಭಿಯಾನ ಆಯೋಜಿಸಿ ಅರಿವು ಮೂಡಿಸಲು ಪಣ ತೊಡಲಾಯಿತು. 2ನೇ ಫೆಬ್ರವರಿ, 2010 ರಾಮ್ಸರ್ ಬೆಂಬಲಿತ ಸಭೆ ಕೋರಿಯಾ ದೇಶದಲ್ಲಿ ಜರುಗಿತ್ತು.

ತರಿ ಭೂಮಿ ಕಡಿತ ಬದುಕಿಗೇ ತೆರೆ ಎಳೆಯಬಲ್ಲುದು!

■ ಹರ್ಷವರ್ಧನ ವಿ. ಶೀಲವಂತ

ಧಾರವಾಡದ ನವಿಲೂರು ಹಾಗೂ ಕೆಲಗೇರಿ ಕೆರೆಗಳಿಗೆ ಇತ್ತೀಚೆಗೆ ಬಣ್ಣದ ಕೊಕ್ಕರೆಗಳು (ಪೇಂಟೆಡ್ ಸ್ಟಾರ್ಕ್) ಬಂದಿಳಿದಿದ್ದವು. ಸುಮಾರು 10 ಜೋಡಿಗಳಿದ್ದವು. ಪಕ್ಷಿಪ್ರಿಯರಿಗಂತೂ ಹಬ್ಬದ ಸಂಭ್ರಮ! ರಂಗನತಿಟ್ಟು ಮೊದಲಾದ ಪಕ್ಷಿಧಾಮದಲ್ಲಿ ಈ ದಂಪತಿಗಳ ಸಂಖ್ಯೆ 2 ರಿಂದ 3 ಸಾವಿರದಷ್ಟು! ತಂದೆ-ತಾಯಿ ಹಕ್ಕಿ, ಮೂರು ಮರಿಗಳಿರುವ 2000 ಕುಟುಂಬಗಳಿಗೆ ದಿನವೊಂದಕ್ಕೆ 40 ರಿಂದ 60 ಕ್ವಿಂಟಲ್‌ಗಳಷ್ಟು ಮೀನುಗಳು ಆಹಾರವಾಗಿ ಬೇಕು!

ಬಣ್ಣದ ನೀರ್ಕೋಳಿಗಳ ಸಂಖ್ಯೆಯಂತೂ ಇವುಗಳಿಗಿಂತ ಎರಡು-ಮೂರು ಪಟ್ಟು ಹೆಚ್ಚಾಗಿದ್ದು ಅವುಗಳಿಗೂ ಮೀನುಗಳೇ ಪ್ರಮುಖ ಆಹಾರ. ಅವುಗಳೊಟ್ಟಿಗೆ ಬಕ ಪಕ್ಷಿ, ಹೆಜ್ಜಾರ್ಲೆ, ಬೆಳ್ಳಕ್ಕಿ, ಟಿಟ್ಟಿಭ ಹೀಗೆ ಎಲ್ಲವನ್ನೂ ಸೇರಿಸುವುದಾದರೆ ಪ್ರತಿ

ದಿನ ಈ ಹಕ್ಕಿಗಳಿಗೆ ಬೇಕಾದ ಮೀನಿನ ಪ್ರಮಾಣ 500 ಕ್ವಿಂಟಲ್ ಗಳಿಗಿಂತಲೂ ಹೆಚ್ಚು! ಅವುಗಳ ದೈನಂದಿನ ಈ ಆಹಾರ ಬೇಡಿಕೆಯನ್ನು ಪೂರೈಸುವಷ್ಟು ನಮ್ಮ ಕೆರೆಗಳು ಸಮೃದ್ಧವಾಗಿವೆ!

ಎಚ್ಚರ.. ಮಾನವ ಎಚ್ಚರ

ಡಾ.ಎಚ್.ಆರ್.ಕೃಷ್ಣಮೂರ್ತಿ ವೈಜ್ಞಾನಿಕ ವಿಷಯಗಳ ಖ್ಯಾತ ಬರಹಗಾರರು. ನನ್ನನ್ನು ಪ್ರಭಾವಿಸಿದ ಕೆಲವರಲ್ಲಿ ಅವರೂ ಒಬ್ಬರು. ಅವರ ಮಾತಿನಲ್ಲೇ ಹೇಳುವುದಾದರೆ, ಈ ಭೂಮಿಯ ಮೇಲೆ ಬದುಕಿರುವ ಯಾವ ಹಕ್ಕಿಯೂ ಉಪವಾಸ ಸಾಯುವುದಿಲ್ಲ ಎಂದಾದರೆ ನಮ್ಮ ಗಮನ ಸೆಳೆಯದ ಕೆರೆ-ತೊರೆ, ಗಮನದಲ್ಲಿರುವ ನದಿಗಳಲ್ಲಿ ಹಬ್ಬಿಕೊಂಡಿರುವ ತರಿ ಭೂಮಿಯ ಅಗಾಧವಾದ ಉತ್ಪಾದನಾ ಸಾಮರ್ಥ್ಯದ ತಿಳಿವಳಿಕೆ ನಮ್ಮ ಜ್ಞಾನಕ್ಷಿತಿಜದ ವಿಸ್ತಾರಕ್ಕೆ ನಿಲುಕದ್ದು. ಜೀವ ವಿಜ್ಞಾನಿಗಳ ದೃಷ್ಟಿಯಲ್ಲಿ ಅತ್ಯಂತ ನಾಜೂಕಾದ, ಕ್ರಿಯಾತ್ಮಕ, ಉತ್ಪನ್ನಶೀಲ, ತರಿಭೂಮಿಯನ್ನು ಕೆಬಳಿಸಲು ಇಂದು ಅದೆಷ್ಟು ಮಂದಿ ಹೊಂಚುಹಾಕುತ್ತಿದ್ದಾರೆ ಗೊತ್ತೆ?

ನಮ್ಮ ವಯಕ್ತಿಕ ಕಾಳಜಿ!

ನಗರಗಳನ್ನು ವಿಸ್ತರಿಸುವ ಸಂಸ್ಥೆಗಳಿಗೆ ತರಿ ಭೂಮಿಯನ್ನು ಒಡೆದು, ನೀರನ್ನು ಬಸಿದು, ಕೆರೆಯ ಅಂಗಳಗಳನ್ನು ನಿವೇಶನಗಳನ್ನಾಗಿಸುವ ಕನಸು; ಉದ್ದಿಮೆದಾರರಿಗೆ ಕೆರೆ-ಕುಂಟೆ, ಕಾಲುವೆ-ಹಳ-ತೊರೆಗಳನ್ನು ಕಸ, ತ್ಯಾಜ್ಯ, ಹೊಲಸಿನಿಂದ ತುಂಬಿ ಧುಮ್ಮಸ್ ಬಡಿದು ಕಾರ್ಖಾನೆಗಳನ್ನು ಎಬ್ಬಿಸುವ ಆದಮ್ಯ ಬಯಕೆ. ಇನ್ನು ಕಾರ್ಖಾನೆ ಆಡಳಿತಗಾರರದ್ದು ತಮ್ಮಿಂದ ಹೊರಬಂದ ವಿಷಯುಕ್ತ ರಾಸಾಯನಿಕಗಳನ್ನು ಸದ್ದಿಲ್ಲದೇ ಕೆರೆಗಳಿಗೆ ಹರಿಸಿ ಕೈತೊಳೆದುಕೊಳ್ಳುವ ಹೊಂಚು; ಕೆರೆಯ ಸುತ್ತಲಿನ ದೊಡ್ಡಕುಳಗಳಿಗೆ ಕೆರೆಯಂಗಳದ ಮಣ್ಣನ್ನು ಮೇಲಕ್ಕೆತ್ತಿ ಇಟ್ಟಂಗಿ ರೂಪಿಸುವ ಯೋಚನೆ! ಕೆರೆಯಂಚಿನಲ್ಲಿರುವ ಶ್ರೀಮಂತರಿಗೆ ಕೆರೆಯನ್ನು ಒತ್ತುವರಿ ಮಾಡಿ ಜಮೀನನ್ನು ವಿಸ್ತರಿಸುವ ಆಸೆ!

ಅಭಿವೃದ್ಧಿಯ ನಾಗಾಲೋಟ ಹೀಗಿದೆ

ಈ ಎಲ್ಲ ಅಭಿವೃದ್ಧಿ ಸದೃಷ ಬೆಳವಣಿಗೆಗಳ ಫಲ? ಏಷ್ಯಾ ಖಂಡದಲ್ಲಿ ಪ್ರತಿ ನಿಮಿಷಕ್ಕೆ ಒಂದು ಹೆಕ್ಟೇರ್ ನಷ್ಟು ತರಿಭೂಮಿ ಕಣ್ಮರೆಯಾಗುತ್ತಿದೆ; ಕರ್ನಾಟಕದಲ್ಲಿ ವರ್ಷವೊಂದಕ್ಕೆ 35 ಕೆರೆಗಳು ಕಣ್ಮುಚ್ಚುತ್ತಿವೆ. ಧಾರವಾಡ ಜಿಲ್ಲೆಯ ಕೆರೆಗಳಲ್ಲಿ ಶೇ.31ರಲ್ಲಿ ಆಪಾರ ಹೂಳು. ಶೇ.13 ರಷ್ಟು ಕೆರೆಗಳಲ್ಲಿ ಕೈಗಾರಿಕೆಗಳ ಕಲ್ಮಶ. 47 ರಲ್ಲಿ ಇಟ್ಟಿಗೆಯ ಗೂಡುಗಳು; 39 ರಲ್ಲಿ ಕೃಷಿ ಭೂಮಿಯ ಒತ್ತುವರಿ, 36 ರಲ್ಲಿ ಪಕ್ಷಿಗಳ ನಿರಂತರ ಬೇಟೆ. ನೂರಾರು ಕೆರೆ-ಕುಂಟೆಗಳಲ್ಲಿ ವೈವಿಧ್ಯಮಯ

ಜೀವರಾಶಿಯ ಬದಲಿಗೆ ದುರ್ವಾಸನೆ ಬೀರುವ, ಕೊಳೆತ ವಸ್ತುಗಳನ್ನು ಒಳಗೊಂಡ, ಸುತ್ತಮುತ್ತಲಿನ ಜೀವಿಗಳಿಗೆ ಮಾರಕವಾದ ನೊರೆತುಂಬಿದ ಹೊಲಸು! ನಮ್ಮ ತರಿಭೂಮಿಯ ಹದಗೆಡುತ್ತಿರುವ ಪರಿಸ್ಥಿತಿಯನ್ನು ಸ್ಪಷ್ಟವಾಗಿ ನೀರ್ಕೋಳಿಗಳು ತೋರಿಸುತ್ತಿವೆ.

ಏನಿದು ತರಿಭೂಮಿ?

ತರಿಭೂಮಿ, ನೀರಾವರಿಯಿಂದ ಬೆಳೆ ತೆಗೆಯುವ ಜಮೀನಿಗೆ ಮಾತ್ರ ಸೀಮಿತವಾಗಿಲ್ಲ, ನೀರು-ನೆಲ ಸಂಧಿಸುವ ಎಲ್ಲ ಜಾಗಗಳನ್ನೂ ಈ ಗುಂಪಿಗೆ ಸೇರಿಸಬಹುದು. ಈ ದೃಷ್ಟಿಯಿಂದ ಕೆರೆ, ಸರೋವರ, ಜಲಾಶಯ, ಆಳವೆ, ಹಿನ್ನೀರಿನ ಜೌಗು ನೆಲಗಳೆಲ್ಲವೂ ತರಿಭೂಮಿಗಳೇ. ನೀರು ಮತ್ತು ನೆಲ ಈ ಎರಡೂ ಪ್ರಮುಖ ನೆಲೆಗಳೂ ನೀಡುವ ಅತ್ಯುತ್ತಮ ಪೋಷಣೆಯನ್ನು ಬಳಸಿಕೊಳ್ಳುವ ವೈವಿಧ್ಯಮಯವಾದ ಜೀವಿ ಪ್ರಪಂಚವನ್ನು ನಾವು ತರಿಭೂಮಿಯಲ್ಲಿ ಕಾಣಬಹುದು. ಭರತಪುರದ ಜೌಗುನೆಲ -ವಿದೇಶದ ಅಪರೂಪದ ಕೊಕ್ಕರೆಗಳಿಗೆ ಆಸರೆ; ಕಾಜಿರಂಗಾ ರಾಷ್ಟ್ರೀಯ ಉದ್ಯಾನದ ಬದಿ ಭೂಮಿ, ಒರಿಸ್ಸಾದ ಚಿಲ್ಕಾ

ಸರೋವರ, ಮದ್ರಾಸ್ ಸಮೀಪದ ತಾಡಾ ಹಿನ್ನೀರು ಪ್ರದೇಶ, ರನ್ ಆಫ್ ಕಛ್‌ನ ಜೌಗು ಬೆಂಗಾಡು, ಸುಂದರಬನ್ ಮ್ಯಾನ್‌ಗ್ರೋವ್ ಜೌಗು ಪ್ರದೇಶಗಳು ತರಿಭೂಮಿಗೆ ಹೆಸರು ವಾಸಿ.

ನಮ್ಮೂರ ಕೆರೆಗೆ ಅಂತಾರಾಷ್ಟ್ರೀಯ ಮನ್ನಣೆ!

1990 ರಿಂದ 1993ರ ವರೆಗೆ ಸುಮಾರು ಮೂರು ವರ್ಷಗಳ ವರೆಗೆ ನಡೆದ ಗಣತಿಯಿಂದ 26 ದೇಶಗಳ 1319 ತರಿ ಭೂಮಿಗಳ ಸ್ಥಿತಿಗತಿಯ ಬಗ್ಗೆ ಸಾಕಷ್ಟು ನಿಖರವಾದ ಮಾಹಿತಿ ದೊರಕಿದೆ. ಯಾವುದೇ ತರಿಭೂಮಿ 20,000 ಕ್ಕೂ ಹೆಚ್ಚಿನ ಜಲಪಕ್ಷಿಗಳಿಗೆ ಆಸರೆ ಒದಗಿಸಿ ಪೋಷಿಸಿದರೆ ಅಂತಹ ತರಿಭೂಮಿಗೆ ಅಂತಾರಾಷ್ಟ್ರೀಯ ಮನ್ನಣೆ, ನೆರವು ದೊರಕುತ್ತದೆ. ಸ್ಥಳೀಯರಾದ ನಾವು ಮನಸ್ಸು ಮಾಡಬೇಕು. ಕಣ್ಣರೆ ಅಂಚಿನಲ್ಲಿರುವ 64 ಪ್ರಬೇಧಗಳಿಗೆ ಸೇರಿದ ನೀರ್ಕೋಳಿಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ 31 ಪ್ರಜಾತಿಯ ನೀರ್ಕೋಳಿಗಳು ಭಾರತದ ತರಿಭೂಮಿಗಳಲ್ಲಿ ಕಾಣಸಿಗುತ್ತವೆ. ಇವುಗಳಲ್ಲಿ ಯಾವುದೇ ಒಂದು ಪ್ರಬೇಧದ ಹಕ್ಕಿ ಸಾಕಷ್ಟು ಪ್ರಮಾಣದಲ್ಲಿ ಒಂದು ಕಡೆ ಸೇರಿದಲ್ಲಿ ಅಂತಹ ತರಿಭೂಮಿಗೂ ಅಂತಾರಾಷ್ಟ್ರೀಯ ಮನ್ನಣೆ ದೊರೆಯುತ್ತದೆ. ಈ ದೃಷ್ಟಿಯಿಂದ ಏಷ್ಯಾಖಂಡದ ತರಿಭೂಮಿ ಕೈಪಿಡಿಯಲ್ಲಿರುವ 947 ನೀರಿನಾಸರೆಗಳಲ್ಲಿ 300ಕ್ಕೆ ಮನ್ನಣೆ ಈಗಾಗಲೇ ಪ್ರಾಪ್ತ! ಆದರೆ ಅವುಗಳಿಗೆ ಸೂಕ್ತ ರಕ್ಷಣೆ ಇಲ್ಲ ಎಂಬುದು ಕಳವಳಕಾರಿ.

ನಮ್ಮ ಸ್ಥಳೀಕರ ಪ್ರಯತ್ನ

ಈ ನಿಟ್ಟಿನಲ್ಲಿ ನಮ್ಮ ಸರಕಾರವನ್ನು ನಂಬಿ ಕೂರುವ ಸ್ಥಿತಿಯಿಲ್ಲ, ಆದರೆ ನಮ್ಮ ಪ್ರಯತ್ನವೇನು? ಇಂದು ಧಾರವಾಡದ ನವಿಲೂರು ಕೆರೆಯಲ್ಲಿ ನೂರಾರು ಮಕ್ಕಳು ಹಾಗೂ ಪರಿಸರ ಪ್ರೇಮಿಗಳು ಉಪಸ್ಥಿತರಿದ್ದು ತರಿ ಭೂಮಿ ಮಹತ್ವ ತಿಳಿದುಕೊಳ್ಳಲಿದ್ದಾರೆ. ಕೆರೆಯ ಸುತ್ತಲಿನ ಪರಿಸರವನ್ನು ಪಕ್ಷಿಗಳಿಗಾಗಿ ಸ್ವಚ್ಛಗೊಳಿಸಲಿದ್ದಾರೆ. ಗ್ರೀನ್ ಆರ್ಮಿಯ ಪ್ರಕಾಶ್ ಗೌಡರ, ಕ್ರಿಯಾಶೀಲ ಗೆಳೆಯರು ಬಳಗದ ಮುಕುಂದ ಮೈಗೂರ, ಪರಿಸರವಾದಿ ಪಂಡಿತ ಮುಂಜಿ ಮಾರ್ಗದರ್ಶನ ಮಾಡಲಿದ್ದಾರೆ.

ಪರಿಸರ ನಮಗಾಗಿ ಮಾತ್ರವೇ ಅಲ್ಲ, ನಮ್ಮ ಮುಂದಿನ ಪೀಳಿಗೆಗಾಗಿಯೂ ಇರಬೇಕಾದುದು. ಅಷ್ಟೇ ಅಲ್ಲ, ನಮ್ಮ ಬದುಕಿಗೆ ಪುಷ್ಟಿನೀಡುವ ಜೀವಲೋಕಕ್ಕಾಗಿ ಉಳಿಸಬೇಕಾದಂಥದ್ದು.

ಗಂಗಾಧರ ಶಾಸ್ತ್ರಿ ನಾಜಗಾರು ಉತ್ತರಕನ್ನಡ ಜಿಲ್ಲೆಯ ಪತ್ರಿಕಾರಂಗದಲ್ಲಿ ಒಂದು ಪ್ರಮುಖವಾದ ಹೆಸರು. ಬಂಡಾಯದವರ ಮಧ್ಯೆ ಮೂಲಭೂತವಾದಿಯಾಗಿ, ಪಂಡಿತರಿಗೆ ಬಂಡಾಯಗಾರನಾಗಿ ಇಬ್ಬರಿಂದಲೂ ವಿರೋಧ, ಮೆಚ್ಚುಗೆ ಎರಡನ್ನೂ ಗಳಿಸಿದವರು. ಯಕ್ಷಗಾನ, ನಾಟಕ, ಪತ್ರಿಕೋದ್ಯಮ, ಶಿಕ್ಷಕ, ಚಿಂತಕ ಹೀಗೆ ಹಲವು ಹೊರಳುಗಳಿರುವ ಇವರಿಗೀಗ 80ರ ಹರೆಯ. ಅದಕ್ಕೆಂದೇ ಅವರ ಆತ್ಮೀಯರೆಲ್ಲಾ ಸೇರಿ 'ಸಹಸ್ರ ಶೀರ್ಷ' ಎನ್ನುವ ಪುಸ್ತಕವನ್ನು ಫೆ. 1ರಂದು ಮುರ್ಡೇಶ್ವರದಲ್ಲಿ ಹೊರತರುತ್ತಿದ್ದಾರೆ.

ಕಟ್ಟಿನಾಚೆಯ ವ್ಯಕ್ತಿತ್ವದ ಪತ್ರಕರ್ತ

ಗಂಗಾಧರ ಶಾಸ್ತ್ರಿನಾಜಗಾರು

■ ನಾರಾಯಣ ಯಾಜಿ, ಸಾಲೇಬೈಲು



ಗಂಗಾಧರ ಶಾಸ್ತ್ರಿ ನಾಜಗಾರು ಉತ್ತರಕನ್ನಡ ಜಿಲ್ಲೆಯ ಪತ್ರಿಕಾರಂಗದಲ್ಲಿ ಒಂದು ಪ್ರಮುಖವಾದ ಹೆಸರು. ಖ್ಯಾತ ಪತ್ರಕರ್ತ ಜಿ. ಆರ್. ಪಾಂಡೇಶ್ವರರ ಶಿಷ್ಯ ಮತ್ತು ಪ್ರಭಾವಗಳಿಂದ ನಿರ್ಭಿಡೆಯ ಪತ್ರಕರ್ತರಾಗಿ ರೂಪುಗೊಂಡ ಅವರು ಹೊನ್ನಾವರದ ಸಾಂಸ್ಕೃತಿಕ ಬದುಕಿನ ಕೊಂಡಿಯೂ ಹೌದು. ಇವರು ಸ್ಥಾಪಿಸಿದ 'ಶೃಂಗಾರಮಂಟಪ'ದ ಮೂಲಕ ಹೊರತಂದ 'ಶೃಂಗಾರ' ಮಾಸಪತ್ರಿಕೆ ಇವತ್ತಿಗೂ ಸಂಗ್ರಾಹ್ಯ ಸಂಚಿಕೆಗಳಾಗಿ ಉಳಿದಿದೆ.

ಗಂಗಾಧರ ಶಾಸ್ತ್ರಿ ನಾಜಗಾರು ನಮಗೆಲ್ಲ ಪ್ರೀತಿಯ ಗಂಗಾಧರ ಮಾವ. ತನ್ನ ಸಹಸ್ರಚಂದ್ರ ದರ್ಶನ ದಾಟುತ್ತಿರುವ ಈ ಹೊತ್ತಿನಲ್ಲಿ ಅವರ ಕುರಿತು ಹೇಳುವುದು ಅಂದರೆ 'ನನ್ನ ಎದೆಯಾಳದಲ್ಲಿ ಅಡಗಿ ಕುಳಿತು ನನ್ನ ಎಲ್ಲ ಸಾಹಿತ್ಯಿಕ ಚಟುವಟಿಕೆಗಳ ಹಿಂದೆ ಇರುವ ಪ್ರೇರಣೆ. ಅನೇಕ ಸಂದರ್ಭದಲ್ಲಿ ಪರೋಪಕಾರೀ ಪಾಪಣ್ಣನ ಹಾಗೇ ಕಾಣುವ ಇವರು ತನ್ನನ್ನ ವಿರೋಧಿಸಿದವರೇ ಇರಲಿ, ಕಷ್ಟದಲ್ಲಿದ್ದಾಗ ಅವರೇನಾದರೂ ಸಹಾಯ ಕೇಳಿಬಂದರೆಂದರೆ ಅದುವರೆಗಿನ ಸಿಟ್ಟನ್ನೆಲ್ಲಾ ಮರೆತು ಅವರ ಸಲುವಾಗಿ ರಟ್ಟೆ, ಪೆನ್ನು ಎರಡನ್ನು ಏರಿಸಿಹೊರಡುತ್ತಾರೆ. ಆಮೇಲೆ ಆ ಕೆಲಸ ಆಗಿ ಅವರು ಇವರನ್ನ ಮರೆತಾಗಲೂ ಅಷ್ಟೆ ಅಲ್ಲಿಯವರೆಗೆ ತಾನು ಮಾಡಿದ ಉಪಕಾರವನ್ನು ಹೇಳಿಕೊಳ್ಳದೇ ಸುಮ್ಮನೆ ತನ್ನ ಪಾಡಿಗೆ ತಾನು ಇರುತ್ತಾ ವಿಷಯಾಧಂತ ಚರ್ಚೆಗೆ ಮಾತ್ರ ಮುಂದಾಗುತ್ತಾರೆ. ಆದರೆ ಆ ಭಿನ್ನಾಭಿಪ್ರಾಯದಲ್ಲೆಲ್ಲೂ ಆ ವ್ಯಕ್ತಿ ಈ ಮಧ್ಯೆ ತನ್ನ ಸಹಾಯ ಯಾಚಿಸಿ ಬಂದದ್ದನ್ನು ಮಾತ್ರ ಹೇಳಿಕೊಂಡು ಅವರನ್ನು ಚುಚ್ಚಿದ್ದನ್ನು ನಾನೆಂದೂ ನೋಡಿಲ್ಲ.

ನನ್ನ ಬಾಲ್ಯದ ಕನಸು ಕಟ್ಟುವ ಹೊತ್ತಿಗಿನ ನನ್ನ ಗಂಗಾಧರ ಮಾವ ನೆನಪಾಗುವುದು ಅವರ ಕೆಳಗಿನೂರಿನ ನಾಜಾಗಾರದ ಅವರ ಮೂಲಮನೆಯಲ್ಲಿ ಮಾಸ್ತರರಾಗಿ ಇರುತ್ತಿರುವಾಗಿನದು. ನನ್ನ ಆಯಿಗೆ ಅವರು ಪ್ರೀತಿಯ ಭಾವಯ್ಯ. ಅಪ್ಪನಿಗೆ ಅವರು ಪ್ರೀತಿಯ ಗಂಗಾಧರಣ್ಣ. ನನ್ನಪ್ಪನಿಗೆ ಅವರೆಂದರೆ ಅದೇನೋ ಒಂದು ಬಗೆಯ ಪ್ರೀತಿ. ಅವರಿಗೂ ಅಷ್ಟೆ ನನ್ನಪ್ಪ ರಾಮ ಯಾಜಿ ಮಾಸ್ತರರು ಎಂದರೆ ಸಾಹೋದರ್ಯ ಪ್ರೇಮ. ಒಂದು ಘಟನೆ ನನ್ನ ಅಪ್ಪ ಹೇಳುತ್ತಿರುವುದು ನೆನಪಾಗುತ್ತದೆ. ನನ್ನನ್ನು ಕಲಿಯಲು ಹುಶಾರಿದ್ದೆ ಎಂದು ಐದು ವರ್ಷಕ್ಕೇ ಶಾಲೆಗೆ ಸೇರಿಸಿದ್ದರಂತೆ. ಆದೇಕೋ ನನ್ನಪ್ಪನ ಮೇಲಿನ ಸಿಟ್ಟಿಗೋ ಯಾರೋ ಆಗದ ಅವರ ವೃತ್ತಿ ಬಂಧುವೊಬ್ಬರು ಮೂಗರ್ಜಿ ಬರೆದು ನನ್ನ ದಾಖಲಾತಿಯೇ ಅಸಿಂಧು ಎಂದು ಆ ವರ್ಷದ ಅಂತ್ಯದ ಹೊತ್ತಿಗೆ ಶಾಲೆಯಿಂದಲೇ ನನ್ನನ್ನು ತೆಗೆದು ಹಾಕುವ ಸ್ಥಿತಿಗೆ ಬಂದಿತ್ತಂತೆ. ಅದಕ್ಕೆ ಅವಧಾನಿ ಎನ್ನುವ ಒರ್ವರು ಶಾಲಾ ಇನ್‌ಸ್ಪೆಕ್ಟರ್ ವಿಚಾರಣೆಗೆಂದು ಬಂದಿದ್ದಾಗ ಇವರು ಆ ಇಡೀ ಪತ್ರವೇ ಹೇಗೆ ಒರ್ವ ವಿದ್ಯಾರ್ಥಿಯ ಭವಿಷ್ಯಕ್ಕೆ ಮಾರಕ ಮತ್ತು ಹೇಗೆ ನನ್ನ ದಾಖಲಾತಿ ಸಿಂಧು ಎಂದು ಸಮರ್ಥವಾಗಿ ತಿಳಿಸಿ ಆ ಪ್ರಕರಣವನ್ನು ಸುಖಾಂತ್ಯವನ್ನಾಗಿ ಮಾಡಿದ್ದರಂತೆ. ಇವರು ಒಳ್ಳೆಯ ವಕೀಲರಾಗಿರುತ್ತಿದ್ದರೆ ಅವರ ಎದುರು ಯಾರೂ ನಿಲ್ಲುತ್ತಿರಲಿಲ್ಲ ಎಂದು ನನ್ನ ಅಪ್ಪ ಯಾವಾಗಲೂ ಹೇಳುತ್ತಿದ್ದ.

ಶಾಸ್ತ್ರಿಗಳ ವ್ಯಕ್ತಿತ್ವ ನನ್ನಲ್ಲಿ ಅಚ್ಚಳಿಯದೇ ಉಳಿದುದಕ್ಕೆ ಮತ್ತೊಂದು ಕಾರಣ ಅವರಲ್ಲಿರುವ ಕವಿತಾಶಕ್ತಿ. ಇವರು ಬರೆದ

ಯಾರೋ ಕನಸಿನ ಸೀಮೆಯ ಹುಡುಗಿ
ಹೆಸರಿನ ನೆನಪೇ ಮಾಸಿತ್ತು

ಎನ್ನುವ ಕವನ, ಅದನ್ನು ಇಂಪಾಗಿ ಹಾಡಿದ ಇವರ ಮಗಳು ಲಕ್ಷ್ಮಿ ಮತ್ತು ಎಸ್. ಎಮ್. ಭಟ್ಟ ನಾಜಗಾರು ಅಮೂರ್ತವಾದ ಲೋಕದಿಂದ ಒಂದು ಅಪ್ಸರೆಯನ್ನೇ ತಂದು ಎದುರು ನಿಲ್ಲಿಸಿಬಿಡುತ್ತಾರೆ. ಇಂತಹ ಕವನಗಳನ್ನು ಬರೆದ ಘಳಿಗೆಯಾದರೂ ಎಂತಹದೆಂದರೆ ಶಾಲೆಯಲ್ಲೂ ಅಥವಾ ಯುವಜನ ಮೇಳಗಳಿಗೋ ಹಾಡಲು ಒಂದು ಭಾವಗೀತೆ ಬೇಕೆಂದು ಹೋಗಿ ಕೇಳಿಕೊಡರೆ ಸಾಕು ಆ ಕ್ಷಣಕ್ಕೆ ನಮ್ಮದೇ ಪಟ್ಟಿಯಲ್ಲಿ ಅವು ರೆಡಿ. ಅವರು ಬರೆದ ಪ್ರತಿಗಳನ್ನು ಮತ್ತೆ ತಿದ್ದಿದ ಉದಾಹರಣೆಗಳನ್ನು ನಾನು ನೋಡಿಲ್ಲ; ಶಾಲೆಯಲ್ಲಿ ವಾರ್ಷಿಕೋತ್ಸವಕ್ಕೆಂದು ಮಕ್ಕಳಿಗೆ ಬರೆದುಕೊಟ್ಟ 'ಬಾರೋ ಕಟ್ಟಿಗೆ ತರುವಾ ಬೀರಾ ನೀ ಚಲುವಾ' ಆಗಲೀ, ಅಥವಾ 'ಕೋಳಿ ತಂದಾರೋ.... ನಮ್ಮ ಜಟ್ಕಾನ ಪೂಜೆಗೆ...' ಎನ್ನುವ ಕವನಗಳೆಲ್ಲಾ ವಿಮರ್ಶಕರನ್ನು ಮುಟ್ಟದೇ ಇರುವುದು ಮಾತ್ರ ವಿಷಾದನೀಯ. ನೆನಪಿಸಲೇಬೇಕಾದ ಮತ್ತು ಮರೆಯಲಾರದ ಒಂದು ಭಾವಗೀತೆ 'ರಸಿಕ ರಂಗನು ಬಂದ ಕುಣಿಯಲೇಳೆ ರಂಗಿ'

ಈ ಗೀತೆಯನ್ನ ಸುಮ್ಮನೆ ಒಮ್ಮೆ ಹಾಗೆ ಓದಿಕೊಂಡು ಹೋದರೆ ಸಾಕು. ಶಾಸ್ತ್ರಿಗಳು ನಮ್ಮನ್ನು ನಂದಗೋಕುಲಕ್ಕೆ ಕರೆದೊಯ್ಯುತ್ತಾರೆ. ಸರಳ ಶಬ್ದಗಳ ಮೂಲಕ ಸೌಂದರ್ಯದ ಸೂರೆಯನ್ನೆ ನಮ್ಮೆದುರಿಗೆ ಸುರಿಸುವ ಅವರ ಕವಿತೆಗಳ ಮರು ಸಂಗ್ರಹದ ಅಗತ್ಯ ಅವರಿಗಲ್ಲ ಕನ್ನಡ ಸಾರಸ್ವತ ಲೋಕಕ್ಕೆ ಒಂದು ಬಹು ದೊಡ್ಡ ಕೊಡುಗೆ ಎನ್ನುವುದರಲ್ಲಿ ಸಂಶಯವಿಲ್ಲ. ಆದೇಕೆ ಇಂದು ಯಕ್ಷಗಾನದಲ್ಲಿ ಸ್ತ್ರೀ ಪಾತ್ರ ಎಂಬ ಪ್ರವೇಶವಾದರೆ ಸಾಕು ಭಾಗವತರು ಹಾಡುವ 'ಎಲ್ಲೆಲ್ಲೂ ಸೊಬಗಿದೆ..'ಯ ರಚನೆ ಇವರದೇ ಎನ್ನುವುದು ಬಹುಜನರಿಗೆ ತಿಳಿದಿಲ್ಲ. ಇವರ ನಾಟಕಗಳಂತೂ ಒಂದೊಂದು ವಿಭಿನ್ನವಾದವುಗಳು. 'ಶಾಕುಂತಲಾ' ನಾಟಕ ಇವರ ಶ್ರೇಷ್ಠಕೃತಿಗಳಲ್ಲೊಂದು. ಸಂಗೀತದ ರಾಗ ಮತ್ತು ತಾಳಗಳ ಕುರಿತು ಸಮಗ್ರವಾದ ಜ್ಞಾನ ಶಾಸ್ತ್ರಿಗಳಿಗೆ ಇರುವ ಕಾರಣ ಅವರ ಭಾವಗೀತೆಗಳಲ್ಲಿ ಕಾಲದ ಪ್ರಜ್ಞೆಯನ್ನು ಕಾಣಬಹುದು. ಹಾಸ್ಯವಂತೂ ಇವರ ಬರಹಗಳಲ್ಲಿ ಯಥೇಚ್ಛವಾಗಿ ದೊರೆಯುತ್ತದೆ. ಅದರಲ್ಲೂ ಮೊನಚು ಹಾಸ್ಯದ